<u>ಸಾಕ್ಷಿಯನ್ನು ದಿಃ13.12.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು ವಾದಿಗಳ ಪರ ಶ್ರೀ. ಜಿ ಸಿ ಎಂ ವಕೀಲರಿಂದಃ</u>**

ಈ ಹಿಂದೆ ನಡೆದ ಪ್ರಕರಣದಲ್ಲಿ ನಾನೇ ವಿಚಾರಣೆ ಕೊಟ್ಟಿದ್ದೇನೆ. ಆಗ ನಾನು ಮತ್ತು ಎದುರುದಾರರ ಏನು ದಾಖಲೆ ಹಾಕಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ಸರ್ವೆ ನಂ.161/1 ರಲ್ಲಿ ನಮಗೆ 15 ಎಕರೆ ಜಮೀನು ಇದೆ. ಸದರಿ ಹಿಂದಿನ ದಾವೆಯಲ್ಲಿ ಡಿಕ್ರಿ ಪ್ರಕಾರ ನನಗೆ 15 ಎಕರೆ ಕೊಟ್ಟಿದ್ದಾರೆ. ಸದರಿ ಹಿಂದಿನ ದಾವೆಯಲ್ಲಿ ಆ 15 ಎಕರೆಯ ವಿಸ್ತೀರ್ಣ ಮತ್ತು ಚೆಕ್ಕು ಬಂದಿ ನಮೂದಿಸಿದ್ದೆ. ಸಾಕ್ಷಿಗೆ ನಿಡಿ-2 ತೋರಿಸಿ ಓಎಸ್ 104/2005 ದಾವೆಯ ಡಿಕ್ರಿ ನಾನೇ ಹಾಜರು ಮಾಡಿದ್ದೇನೆ ಅನ್ನುವುದು ನಿಜ. ನಿಡಿ-2 ರಲ್ಲಿ ಅನುಸೂಚಿ ಸ್ವತ್ತಿನ ವಿವರಣೆಯಲ್ಲಿ ವಿವರಣೆಯಲ್ಲಿ 15 ಎಕರೆ ಇದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸದರಿ ದಾಖಲೆನೋಡಿ ಹೌದು ಎಂದು ಹೇಳಿ ನಂತರ ಎರಡು ಪೋಡಿಯಾಗಿ ಒಂದು 5 ಎಕರೆ ಇನ್ನೊಂದು 4 ಎಕರೆ ಇದೆ ಎಂದು ತಿಳಿಸುತ್ತಾರೆ. ಸಾಕ್ಷಿಯು ಮುಂದುವರೆದು ಆ ಅನುಸೂಚಿಯಲ್ಲಿ ಹೇಳಿದ ಸ್ವತ್ತಿನಲ್ಲಿಯೇ 15 ಎಕರೆ ಬರುತ್ತದೆ ಎಂದು ಹೇಳುತ್ತಾರೆ. ಸದರಿ ದಾವೆ ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. 15 ಎಕರೆಗೆ ಸರ್ವೆ ನಂಬರ್ ಆಧಾರದ ಮೇಲೆ ಚೆಕ್ಕು ಬಂದಿ ಹೇಳಿದ್ದೇನೆ. ಸರ್ವೆ ನಂ.161/1 ರಲ್ಲಿ 15 ಎಕರೆ ನನ್ನ ಹೆಸರಿನಲ್ಲಿ ಪಹಣಿ ಇದ್ದು ಅದನ್ನು ಹಾಜರು ಮಾಡಿದ್ದೇನೆ. ಸಾಕ್ಷಿಗೆ ತಾನು ಸಲ್ಲಿಸಿರುವ ಎಲ್ಲಾ ದಾಖಲೆಗಳನ್ನು ಕೊಟ್ಟು ಇವುಗಳಲ್ಲಿ ಸಿದ್ದವೀರಪ್ಪ ಅಥವಾ ತನ್ನಹೆಸರಿನಲ್ಲಿ 15 ಎಕರೆ ಪಹಣಿ ಇದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅವೆಲ್ಲವುಗಳನ್ನು ನೋಡಿ ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು 1986 ನೇ ಸಾಲಿನ ವರೆಗೆ ಸಿದ್ದ ವೀರಪ್ಪ ಹೆಸರಿನಲ್ಲಿ ಪಹಣಿ ಇವೆ ಎಂದು ಹೇಳುತ್ತಾರೆ. ಆದರೆ ಸದರಿ 1986 ರ ವರೆಗಿನ ಸಿದ್ದವೀರಪ್ಪ ಹೆಸರಿನ 15 ಎಕರೆ ಪಹಣಿ ಇದೆ ಎಂದು ತೋರಿಸಲು ಹಳೆ ಪಹಣಿ ಕೊಟ್ಟಿಲ್ಲ. ನಿಡಿ-2

ರಲ್ಲಿ 15 ಎಕರೆಗೆ ಹೇಳಿರುವ ಚೆಕ್ಕು ಬಂದಿ ತೋರಿಸುವ ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಅಜ್ಜ ಎಂದು ಹೇಳಿಕೊಳ್ಳುವ ಸಿದ್ದವೀರಪ್ಪ 15 ಎಕರೆ ಜಮೀನು ಕ್ರಯಕ್ಕೆ ತೆಗೆದುಕೊಂಡ ದಾಖಲೆ ನ್ಯಾಯಾಲಯದಲ್ಲಿ ಹಾಜರು ಮಾಡಿದ್ದೇನೆ. ಸದರಿ ಕ್ರಯ ಪತ್ರದಲ್ಲಿ ಇರುವ ಚೆಕ್ಕು ಬಂದಿಯನ್ನು ತಿಳಿದುಕೊಳ್ಳಲು ಹೋಗಿಲ್ಲ.

ವಾದಿ ಪರವಾಗಿ ನ್ಯಾಯಾಲಯದಲ್ಲಿ ಏನೆಲ್ಲಾ ದಾಖಲೆಗಳನ್ನು ಹಾಜರು ಮಾಡಿದ್ದಾರೆಂದು ವಕೀಲರ ಮೂಲಕ ತಿಳಿದುಕೊಂಡಿಲ್ಲ. ಸಾಕ್ಷಿಗೆ ಎರಡು ಪುಟ ಇರುವ ಟಿಪ್ಪಣಿ ನಿಪಿ-17 ತೋರಿಸಿ ಸರ್ವೆ ನಂ.161/1 ರ ಎಲ್ಲಾ ಚೆಕ್ಕು ಬಂದಿ, ವಿಸ್ತೀರ್ಣ ಸರಿ ಇದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಎಲ್ಲಾ ನೋಡಿ ಸರಿ ಇರಬಹುದು ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ-15 ಕ್ರಯ ಪತ್ರ ತೋರಿಸಿ ನೀವು ಈ ಕ್ರಯ ಪತ್ರದ ಆಧಾರದ ಮೇಲೆ15 ಎಕರೆ ಸೇರ ಬೇಕು ಎಂದು ಕೇಳುತ್ತಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆ ದಾಖಲೆಗಳನ್ನು ನೋಡಿ ಹೌದು ಎಂದು ನುಡಿಯುತ್ತಾರೆ. ಕ್ರಯ ಪತ್ರ ನಿಡಿ-15 ರಲ್ಲಿ 15 ಎಕರೆ ಚೆಕ್ಕು ಬಂದಿ ಪೂರ್ವಕ್ಕೆ ಅಮರಾಪುರದ ದಾರಿ, ಪಶ್ಚಿಮಕ್ಕೆ ರಿ .ಸ.164, ಉತ್ತರಕ್ಕೆ ಸರ್ವೆ ನಂ.159 ನೇ ಜಮೀನು , ದಕ್ಷಿಣಕ್ಕೆ ಸರ್ವೆ ನಂ.162 ಎಂದು ನಮೂದಾಗಿರುವುದು ಸರಿ.

ನಾನು ಹಾಕಿರುವ ನಿಡಿ-7 ರಿಂದ ನಿಡಿ-10 ದಾಖಲೆಗಳಲ್ಲಿ ಸರ್ವೆ ನಂ.161/1 ರ ಒಟ್ಟು ವಿಸ್ತೀರ್ಣ 67 ಎಕರೆ 10 ಗುಂಟೆ ಇದೆ ಎಂದರೆ ನಿಜ. ನಿಪಿ-17 ರ 2 ನೇಪುಟದಲ್ಲಿರುವ ಟಿಪ್ಪಣಿ ನಕಾಶೆ ಸರ್ವೆ ನಂ.161/1 ರ ಸಂಪೂರ್ಣ 67 ಎಕರೆ 10 ಗುಂಟೆ ಹೈನು ಜಮೀನು, ಖರಾಬು 1 ಎಕರೆ 35 ಗುಂಟೆ ಒಟ್ಟು 69 ಎಕರೆ 5 ಗುಂಟೆಗೆ ಸೇರಿದೆ ಎಂದರೆ ಸರಿ. ಸದರಿ ನಕಾಶೆಯಲ್ಲಿ ಸರ್ವೆ ನಂ.161/1 ರ ಖರಾಬು ಜಮೀನಿನ ಪೂರ್ವಕ್ಕೆ ಸರ್ವೆ ನಂ.162 ಎಂದು

ಇರುವುದು ಸರಿ. ಆದರೆ ಸರ್ವೆ ನಂ.162 ದಕ್ಷಿಣಕ್ಕೆ ಇರುತ್ತದೆ. ಅದೇ ರೀತಿ ಸರ್ವೆ ನಂ.161/1 ರ ಉತ್ತರಕ್ಕೆ ಮಡಕಶಿರಾ ತಾ. ಎಂದು ಬರೆದಿದೆ ಎಂದರೆ ಸರಿ. ಅದೇ ರೀತಿ ಪಶ್ಚಿಮಕ್ಕೆ ಸರ್ವೆ ನಂ.159 ಎಂದು ನಮೂದಿಸಲಾಗಿದೆ ಎಂದರೆ ಸರಿ, ಆದರೆ ಪಶ್ಚಿಮಕ್ಕೆ ಸರ್ವೆ ನಂ.164 ಇರುತ್ತದೆ. ಸದರಿ ನಕ್ಷೆ ಪ್ರಕಾರ ಸರ್ವೆ ನಂ.164 ಇದೆ ಎಂದರೆ ಸುಳ್ಳು. ನಿಪಿ-15 ಕ್ರಯ ಪತ್ರ ದಲ್ಲಿ ಸಿದ್ದವೀರಪ್ಪನ ಹೆಸರಿನಲ್ಲಿರುವ 15 ಎಕರೆ ಜಮೀನಿನ ಸರ್ವೆ ನಂ.161/1 ಕ್ಕೆ ನಿಡಿ-17 ರ 2 ನೇಪುಟದಲ್ಲಿರುವ ಖರಾಬು ಸೇರಿ ಸಂಪೂರ್ಣ 69 ಎಕರೆ 5 ಗುಂಟೆ ಜಮೀನಿಗೆ ಚೆಕ್ಕು ಬಂದಿ ನಮೂದಿಸಿದ್ದಾರೆ ಎಂದರೆ ನಿಜ ಸಾಕ್ಷಿ ಮುಂದುವರೆದು ಸದರಿ ಚೆಕ್ಕು ಬಂದಿ ಸರ್ವೆ ನಂ.161/1 ಕ್ಕೆ ಸೇರಿದೆ ಎಂದು ಹೇಳುತ್ತಾರೆ. ನಿಪಿ-15 ರಲ್ಲಿ 15 ಎಕರೆಗೆ ಚೆಕ್ಕು ಬಂದಿ ನಮೂದಿಸಿಲ್ಲ . ಸದರಿ 69 ಎಕರೆ 5 ಗುಂಟೆಯ ಯಾವ ದಿಕ್ಕಿಗೆ ಅಥವಾ ಮೂಲೆಯಲ್ಲಿ ನಿಮ್ಮ 15 ಎಕರೆ ಬರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದರಲ್ಲಿಯೇ ಬರುತ್ತದೆ ಎಂದು ಹೇಳುತ್ತಾರೆ. ಹಿಂದಿನ ದಾವೆಯಲ್ಲಿಯಾಗಲೀ ಈಗಿನ ದಾವೆಯಲ್ಲಿ ಸರ್ವೆ ನಂ.161/1 ರ 15 ಎಕರೆ ತೋರಿಸುವ ದಾಖಲೆ ಹಾಜರು ಮಾಡಿದ್ದೇನೆ. ಸಾಕ್ಷಿ ಮುಂದುವರೆದು ಹಿಂದಿನ ದಾವೆಯಲ್ಲಿ ಹಾಕಿದ್ದೇನೆ ಎಂದು ಹೇಳುತ್ತಾರೆ. ಆ ದಾಖಲೆ ಈ ದಾವೆಯಲ್ಲಿ ಹಾಜರು ಮಾಡಲು ನನಗೆ ಯಾವುದೇ ತೊಂದರೆ ಇಲ್ಲ. ಆ ದಾಖಲೆ ನಮ್ಮ ವಕೀಲರ ಬಳಿ ಲಭ್ಯವಿರುತ್ತದೆ.

**(ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲೀಗೆ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು)**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.